ಓ.ಎಸ್‌ಃ151/20
ಡಿ.ಡಬ್ಲ್ಯೂಃ 1

<u>ದಿನಾಂಕಃ **25-11-2025** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ವಾದಿಯ ಪರವಾಗಿ ಶ್ರೀಮತಿ.ಜೆ.ಬಿ. ವಕೀಲರಿಂದಃ</u>

ನಾನು ಟೇಲರಿಂಗ್ ಕೆಲಸ ಮಾಡುತ್ತೇನೆ, ನನಗೆ ದಿನಗಳಿಗೆ ರೂ.1000/-, ಕೇಲವೊಮ್ಮೆ ರೂ.1500/- ಇರುತ್ತದೆ. ಪ್ರತಿದಿನ ತಪ್ಪದೆ ಕೆಲಸಕ್ಕೆ ಹೋಗುತ್ತೇನೆ. ನನ್ನ ಹೆಂಡತಿ ಡಿಡಿಯು ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಾಳೆ ಎಂದರೆ ಸರಿ, ಅವಳ ಮಾಸಿಕ ವೇತನ ರೂ.15 ಸಾವಿರ ಇರುತ್ತದೆ. ನನ್ನ ತಿಂಗಳ ಖರ್ಚು ವೆಚ್ಚು ತಗೆದ ನಂತರ ಹಣ ಉಳಿಯುತ್ತದೆ ಎಂದರೆ ಸರಿ. ನನ್ನ ತಾಯಿ ಇದ್ದಾಗ ನನ್ನ ಅಕ್ಕತಂಗಿಯರು ಬಂದು ಹೋಗುತ್ತಿದ್ದರು ಎಂದರೆ ಸಾಕ್ಷಿಯ ಈಗಲೂ ಸಹ ಬಂದು ಹೋಗುತ್ತಾರೆ ಎಂದು ನುಡಿದಿರುತ್ತಾರೆ. ನಾನು ಚಂದ್ರಶೇಖರ ಒಟ್ಟಿಗೆ ವಕಾಲತ್ ಹಾಕಿರುವುದಿಲ್ಲ ಆದರೆ ನಾನು ಸೋಮಶೇಖರ ಒಟ್ಟಿಗೆ ಹಾಕಿರುತ್ತೇವೆ. ಈ ದಾವಾದಲ್ಲಿ ತಕರಾರಿಗೆ ಮಾಹಿತಿ ನಾನೇ ಕೊಟ್ಟಿರುತ್ತೇನೆ. ನನ್ನ ತಕರಾರಿನಲ್ಲಿ ಮನೆ ಭಾಗ ಆಗಿರುತ್ತದೆ ಎಂದು ಬರೆದಿರುತ್ತೇನೆ.

ನಾವು ಅಣ್ಣತಮ್ಮಂದಿರು ಭಾಗದ ಸಲುವಾಗಿ ಅರ್ಜಿಯನ್ನು 2023-24 ರಲ್ಲಿ ಕೊಟ್ಟಿರುತ್ತೇವೆ. 2023-24 ರ ಕ್ಕಿಂತ ಮುಂಚೆ ನನ್ನ ತಾಯಿ ಹೆಸರಿನಲ್ಲಿ ಇತ್ತು ಎಂದರೆ ಸರಿ. 2023-24 ರಲ್ಲಿ ನಾವು ಕೂಡಿ ಇದ್ದೇವು. ನಾನು ಹಾಗೂ ನನ್ನ ಹೆಂಡತಿ ದುಡಿಯುವದರಿಂದ ಸಾಲ ಮಾಡಿ ಅಂಗಡಿ ಕಟ್ಟುವ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಸಾಲ ಪಡೆದು ಅಂಗಡಿ ಕಟ್ಟಿರುತ್ತೇನೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಬಾಡಿಗೆಯಿಂದ ಬಂದಂತಹ ಹಣ ಹಾಗೂ ಹೊಲದಿಂದ ಬಂದಂತಹ ಆಧಾಯ ನಾನೇ ಪಡೆಯುತ್ತೇನೆ ನನ್ನ ಅಣ್ಣತಮ್ಮಂದಿರಿಗೆ ಕೊಡುವುದಿಲ್ಲ ಎಂದರೆ ಸರಿಯಲ್ಲ. ಎಲ್ಲಾ ಕಾಗದ ಪತ್ರವನ್ನು ನಾನೇ ಮಾಡಿಸಿರುತ್ತೇನೆ ಎಂದರೆ ಸರಿ. ಜಮೀನುಗಳಲ್ಲಿ ಭಾಗ ಆಗಿರುವುದಿಲ್ಲ ಕೇವಲ ಮನೆಯಲ್ಲಿ ಭಾಗ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಅಕ್ಕತಂಗಿಯರಿಗೆ ಭಾಗ ಬರುತ್ತದೆ ಎಂದು ಸುಳ್ಳು ದಾಖಲೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ತಾಯಿ ಇದ್ದಾಗ ಕೂಡಿ ಇದ್ದೇವು ಅವಳ ಮೃತ ಪಟ್ಟ ನಂತರ ಭಾಗ ಆಗಿರುತ್ತೇವೆ ಎಂದು ಸುಳ್ಳು ಕಾಗದ ಪತ್ರವನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಚಂದ್ರಕಾಂತ ಇತನಿಗೆ ಆಸ್ತಿಯಲ್ಲಿ ಭಾಗ ಕೊಟ್ಟಿರುವುದಿಲ್ಲ ಮನೆಯಿಂದ ಹೊರಗೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಭಾಗ ಕೊಟ್ಟಿರುವುದಿಲ್ಲ ಎಂದು ಚಂದ್ರಕಾಂತ ಬೇರೆ ವಕೀಲರನ್ನು ನೇಮಿಸಿ

ದಾವಾವನ್ನು ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ. ಅಕ್ಕತಂಗಿಯರಿಗೆ ಭಾಗ ಕೊಡಬಾರದು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ.**

**( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )**

**ಓ. ಹೇ. ಕೇ. ಸರಿ ಇದೆ.**

**ಪ್ರಧಾನ ಜೆಎಂಎಫ್‌ಸಿ ನ್ಯಾಯಾಧೀಶರು**
**ಶಹಾಪೂರ.**